Rotary ರೋಟರಿ ಐಸಿರಿ ಪರ್ಕಳ
ವಲಯ-4, ರೋ. ಜಿಲ್ಲೆ-3182
ನಮ್ಮ ನಡೆ... ಕೃಷಿಯ ಕಡೆ...
UNITE FOR GOOD


Rtn. Francesco Arezzo
R.I. President


Rtn. K. Palaksha
District Governor

# ಐಶ್ವರ್ಯ

ಸಂಪುಟ: 4 ಸಾಪ್ತಾಹಿಕ ಸಂಚಿಕೆ : 23
ದಿನಾಂಕ: 09.12.2025


Rtn. Anil Kumar
President


Rtn. Krishnappa
Secretary

## ರೋಟರಿ ಐಸಿರಿ ಪ್ರಾಯೋಜಿತ “ಪ್ರತಿಭಾಸಿರಿ”



ಸರಕಾರಿ ಸಂಯುಕ್ತ ಪ್ರೌಢಶಾಲೆ ಶೆಟ್ಟಿಬೆಟ್ಟು – ಇದರ ಕ್ರೀಡಾಕೂಟ ಮತ್ತು ವಾರ್ಷಿಕೋತ್ಸವದಲ್ಲಿ ರೋಟರಿ ಐಸಿರಿಯ ಸದಸ್ಯರು ಸಕ್ರಿಯವಾಗಿ ಪಾಲ್ಗೊಂಡು ಕಾರ್ಯಕ್ರಮದ ಯಶಸ್ಸಿಗೆ ಉತ್ತಮ ಕೊಡುಗೆ ನೀಡಿದರು. ವಿಶೇಷವಾಗಿ, "ಪ್ರತಿಭಾ ಸಿರಿ" ಪುರಸ್ಕಾರವನ್ನು ಈ ಸಾಲಿನಿಂದ ಪ್ರಾಯೋಜಿಸಿ ಅತ್ಯುತ್ತಮ ವಿದ್ಯಾರ್ಥಿ, ವಿದ್ಯಾರ್ಥಿನಿಯನ್ನು ಗುರುತಿಸಿ, ಗೌರವಿಸಿ ಇತರ ವಿದ್ಯಾರ್ಥಿಗಳಿಗೂ ಉತ್ತೇಜನ ನೀಡುವ ಶ್ಲಾಘನೀಯ ಯೋಜನೆಯನ್ನು ರೋಟರಿ ಐಸಿರಿ ಆರಂಭಿಸಿತು. ಪ್ರಥಮ ಪುರಸ್ಕಾರ, ಅಂದರೆ 2025–26ನೇ ಸಾಲಿನ ಟ್ರೋಫಿಗಳನ್ನು ಕುಮಾರಿ ಗ್ರೀಷ್ಮಾ ಕೆ. ಮತ್ತು ಭುವನ್ ಪಾಟೀಲ್ ಪಡೆದರು.

ಡಿಸೆಂಬರ್ ಮೂರರಂದು ನಡೆದ ವಾರ್ಷಿಕ ಕ್ರೀಡಾಕೂಟಕ್ಕೆ ರೋಟರಿ ಐಸಿರಿಯ ನಿಯೋಜಿತ ಅಧ್ಯಕ್ಷರಾದ ರೊ. ಸಂದೀಪ್ ಕುಮಾರ್ ಧ್ವಜಾರೋಹಣ ಮಾಡುವ ಮೂಲಕ ಚಾಲನೆ ನೀಡಿದರು. ರೋಟರಿ ಐಸಿರಿಯ ಯುವಜನಸೇವಾ ನಿರ್ದೇಶಕ ರೊ. ಸುಕೇಶ್ ಕುಂದರ್ ಸ್ಪರ್ಧೆಗಳನ್ನು ಉದ್ಘಾಟಿಸಿದರು. ರೋಟರಿ ಐಸಿರಿಯ ಸಮುದಾಯಸೇವಾ ನಿರ್ದೇಶಕ ರೊ. ಕೆ. ಪ್ರಕಾಶ್ ಶೆಣೈಯವರು ಮುಖ್ಯ ಅತಿಥಿಯಾಗಿದ್ದರು.

ಡಿಸೆಂಬರ್ ಆರರಂದು ನಡೆದ ಪ್ರತಿಭಾ ಪುರಸ್ಕಾರ *(2ನೇ ಪುಟಕ್ಕೆ)*

## AG ನೇತೃತ್ವದಲ್ಲಿ ನಡೆದ ಕ್ಲಬ್ ಅಸೆಂಬ್ಲಿ




ಡಿಸೆಂಬರ್ 2ರಂದು ರೋಟರಿ ಐಸಿರಿಯ ಕ್ಲಬ್ ಅಸೆಂಬ್ಲಿ ನಡೆಸಿದ ಸಹಾಯಕ ಗವರ್ನರ್ ರೊ. ಅಮಿತ್ ಅರವಿಂದ್ ಜಿಲ್ಲಾ ಗವರ್ನರ್ ಅಧಿಕೃತ ಭೇಟಿ ಕಾರ್ಯಕ್ರಮಗಳ ಅವಲೋಕನ ಮಾಡಿ ಮಾರ್ಗದರ್ಶನ ನೀಡಿದರು. ರೋಟರಿ ಐಸಿರಿಯ ತಯಾರಿಯ ಕುರಿತು ಮೆಚ್ಚುಗೆ ವ್ಯಕ್ತ ಪಡಿಸಿದರು. ZLF ರೊ. PHF. ಡಾ. ಎ. ಗಣೇಶ್ ಮತ್ತು ZL ರೊ. PHF .ಸ್ಮಿತಾ ಜಿ. ಕಾಮತ್ ಉಪಸ್ಥಿತರಿದ್ದರು.

ರೋಟರಿ ಜಿಲ್ಲಾ ಗವರ್ನರ್ ರೊ. ಪಾಲಾಕ್ಷ ಕೆ. ರವರು ರೋಟರಿ ಐಸಿರಿಗೆ ಡಿಸೆಂಬರ್ 16, ಮಂಗಳವಾರದಂದು **ಅಧಿಕೃತ ಭೇಟಿ** ನೀಡಲಿದ್ದಾರೆ. ಅಂದು ಹಲವಾರು ಪ್ರಾಜೆಕ್ಟ್ ಗಳ ಲೋಕಾರ್ಪಣೆ ಜೊತೆಗೆ ಸಾಯಂಕಾಲ 6.30ಕ್ಕೆ ಮಣಿಪಾಲ ಈಶ್ವರನಗರದ ವೈಷ್ಣವಿ ಸಭಾಭವನದಲ್ಲಿ ಸಾರ್ವಜನಿಕ ಸಭೆ ನಡೆಯಲಿದೆ.

9/12/2025 ವಾರದ ಸಭೆಯನ್ನು **ಹೊರಾಂಗಣ ಸಭೆ**ಯಾಗಿ ಮಂಗಳವಾರ ಸಂಜೆ 6.45 ಕ್ಕೆ ಸರಿಯಾಗಿ ಶಾಂಭವಿ ಹಾಲ್, ಆತ್ರಾಡಿ ಇಲ್ಲಿ ನಡೆಸುವುದಾಗಿ ನಿರ್ಧರಿಸಲಾಗಿದೆ. ಯೋಜಿತ ಸಭಾ ನಡಾವಳಿಗಳೊಂದಿಗೆ, Zonal sports ನ ಅಭೂತಪೂರ್ವ ಸಾಧನೆಯನ್ನೂ ಸಂಭ್ರಮಿಸಲು ಈ ಸಭೆಯನ್ನು ಆಯೋಜಿಸಲಾಗಿದೆ. ಸ್ಪೋರ್ಟ್ಸ್ ನಲ್ಲಿ ಭಾಗವಹಿಸಿದ ಸ್ಪರ್ಧಿಗಳು ಹಾಗೂ ರೋಟರಿ ಐಸಿರಿಯ ಎಲ್ಲಾ ಕುಟುಂಬ ಸದಸ್ಯರು ಭಾಗವಹಿಸಲಿದ್ದಾರೆ.

# ರೋಟರಿ ಐಸಿರಿ ಪ್ರಾಯೋಜಿತ ಪ್ರತಿಭಾಸಿರಿ (ಮೊದಲ ಪುಟದಿಂದ)








ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ರೋಟರಿ ಐಸಿರಿಯ ಸದಸ್ಯರುಗಳಾದ ವಲಯ ಸೇನಾನಿ ರೊ. PHF. ಸ್ಮಿತಾ ಜಿ. ಕಾಮತ್, ಜಿಲ್ಲಾ ಆರ್.ಸಿ.ಸಿ. ಉಪಸಭಾಪತಿ ರೊ. PHF. ಗುರುಪ್ರಸಾದ್ ಕಾಮತ್, ಸಮುದಾಯಸೇವಾ ನಿರ್ದೇಶಕ ರೊ. ಕೆ. ಪ್ರಕಾಶ್ ಶೆಣೈ, ಕಾರ್ಯದರ್ಶಿ ರೊ. ಕೃಷ್ಣಪ್ಪ ಭಾಗವಹಿಸಿ ಬಹುಮಾನ ಮತ್ತು ಪ್ರಶಸ್ತಿಗಳನ್ನು ವಿತರಿಸಿದರು. ರೊ. ನಾಗರಾಜ ಭಟ್ ಉಪಸ್ಥಿತರಿದ್ದರು.



ರೋಟರಿ ಐಸಿರಿಯ ವತಿಯಿಂದ 2025–26ನೇ ಸಾಲಿನ ಅತ್ಯುತ್ತಮ ವಿದ್ಯಾರ್ಥಿಗಳಿಗೆ ನೀಡಿದ ಸುಂದರ "ಪ್ರತಿಭಾ ಸಿರಿ" ಟ್ರೋಫಿಯ ಚಿತ್ರ.








## ಬೌದ್ಧಿಕ ಸಿರಿ ಪರಿಸ್ಥಿತಿ ಮತ್ತು ಮನಸ್ಥಿತಿ!

ಒಂದು ದೊಡ್ಡ ಪಾದರಕ್ಷೆ ಕಂಪನಿಯ ವ್ಯವಸ್ಥಾಪಕರು ಇಬ್ಬರು ಮಾರಾಟ ಪ್ರತಿನಿಧಿಗಳನ್ನು ಒಂದು ಹಳ್ಳಿಗೆ ಮಾರುಕಟ್ಟೆ ಸಮೀಕ್ಷೆಗೆ ಕಳುಹಿಸಿದರು. ಆ ಹಳ್ಳಿ ತುಂಬಾ ಹಿಂದುಳಿದ ಪ್ರದೇಶ. ಅಲ್ಲಿ ಜನರು ಬಹಳ ಸರಳವಾಗಿ ಬದುಕುತ್ತಿದ್ದರು.

ಇಬ್ಬರೂ ಪ್ರತಿನಿಧಿಗಳಿಗೆ ಕಂಪನಿಯ ಆದೇಶ ಇದೇ ಆಗಿತ್ತು: "ಹಳ್ಳಿಯಲ್ಲಿ ಪಾದರಕ್ಷೆಗಳ ಮಾರುಕಟ್ಟೆಗೆ ಅವಕಾಶ ಇದೆಯೇ ಎಂದು ಪರಿಶೀಲಿಸಿ ವರದಿ ನೀಡಿ."

ಮೊದಲ ವ್ಯಕ್ತಿ ಹಳ್ಳಿಗೆ ಹೋಗಿ ನೋಡಿದ. ಅಲ್ಲಿ ಯಾರ ಕಾಲಿಗೂ ಪಾದರಕ್ಷೆ ಇಲ್ಲ. ಎಲ್ಲರೂ ಬರಿಗಾಲಲ್ಲಿ ಓಡಾಡುತ್ತಿದ್ದರು.

ಅವನು ನಿರಾಶನಾಗಿ ವಾಪಸ್ಸು ಬಂದು, ತನ್ನ ಸಮೀಕ್ಷಾ ವರದಿಯನ್ನು ಹೀಗೆ ಬರೆದನು: "ಮಾನ್ಯರೇ, ಆ ಹಳ್ಳಿಯಲ್ಲಿ ಪಾದರಕ್ಷೆ ವ್ಯಾಪಾರಕ್ಕೆ ಯಾವುದೇ ಅವಕಾಶವಿಲ್ಲ. ಏಕೆಂದರೆ ಅಲ್ಲಿ ಯಾರೂ ಪಾದರಕ್ಷೆ ಧರಿಸುವವರೇ ಇಲ್ಲ!". ಈತನ ದೃಷ್ಟಿಗೆ ಇದು ಒಂದು ಸಮಸ್ಯೆಯಂತಿತ್ತು.

ಅದೇ ಹಳ್ಳಿಗೆ ಹೋದ ಎರಡನೇ ಪ್ರತಿನಿಧಿಯೂ ಕೂಡ ಅದೇ ದೃಶ್ಯ ನೋಡಿದ – ಯಾರೂ ಪಾದರಕ್ಷೆ ಧರಿಸಿಲ್ಲ!

ಆದರೆ ಅವನ ಮನಸ್ಸಿನಲ್ಲಿ ಬೇರೆ ರೀತಿಯ ಚಿಂತನೆ ಮೂಡಿತು. ಅವನು ಸಂತೋಷದಿಂದ ವಾಪಸ್ಸು ಬಂದು ತನ್ನ ಸಮೀಕ್ಷಾ ವರದಿ ಹೀಗೆ ಬರೆದನು: "ಮಾನ್ಯರೇ, ಇದು ಅದ್ಭುತ ಅವಕಾಶ! ಆ ಹಳ್ಳಿಯಲ್ಲಿ ಯಾರೂ ಇಂದಿಗೂ ಪಾದರಕ್ಷೆ ಧರಿಸುತ್ತಿಲ್ಲ. ಅಂದರೆ ಇದು ಸಂಪೂರ್ಣ ಹೊಸ ಮಾರುಕಟ್ಟೆ! ಪ್ರತಿಯೊಬ್ಬರೂ ನಮ್ಮ ಭವಿಷ್ಯದ ಗ್ರಾಹಕರೇ!". ಈತನ ದೃಷ್ಟಿಗೆ ಇದು ಒಂದು ಸುವರ್ಣ ಅವಕಾಶವಾಗಿತ್ತು.

ಇಲ್ಲಿ ನಾವು ಒಂದು ಮಹತ್ವದ ಪಾಠವನ್ನು ಕಲಿಯುತ್ತೇವೆ. ಒಂದೇ ಪರಿಸ್ಥಿತಿ, ಒಂದೇ ಸತ್ಯ, ಒಂದೇ ವಾಸ್ತವಿಕೆ – ಆದರೆ ಅದನ್ನು ನೋಡುವ ಮನೋಭಾವ ಮಾತ್ರ ಬೇರೆಯಾಗಿದೆ. ಒಬ್ಬರಿಗೆ ಅದು ಸಮಸ್ಯೆಯಂತೆ ಕಾಣಿಸಿಕೊಂಡರೆ, ಇನ್ನೊಬ್ಬನಿಗೆ ಅದೇ ಸುವರ್ಣ ಅವಕಾಶವಾಗಿ ಕಾಣಿಸಿತು.

ಜೀವನದಲ್ಲೂ ಇದೇ ಸತ್ಯ ಅನ್ವಯಿಸುತ್ತದೆ. ಕೆಲವರು ಸಣ್ಣ ಅಡೆತಡೆ ಬಂದರೂ ಹಿಂಜರಿಯುತ್ತಾರೆ. "ನಮ್ಮಿಂದಾಗುವುದಿಲ್ಲ", "ಇಲ್ಲಿ ಅವಕಾಶವೇ ಇಲ್ಲ" ಎಂದು ಕೈಬಿಡುತ್ತಾರೆ. ಆದರೆ ಇನ್ನೂ ಕೆಲವರು ಅದೇ ಪರಿಸ್ಥಿತಿಯಲ್ಲಿ ಹೊಸ ದಾರಿಯನ್ನೂ, ಹೊಸ ಅವಕಾಶವನ್ನೂ ಕಂಡುಕೊಳ್ಳುತ್ತಾರೆ. ಯಶಸ್ಸು ಎಂದರೆ ಹೊರಗಿನ ಪರಿಸ್ಥಿತಿಗಿಂತಲೂ ಒಳಗಿನ ಮನಸ್ಥಿತಿಯ ಫಲವಾಗಿದೆ.

**ಸಂಕಲನ : ರೊ. ರಾಜೇಶ್ ಡಿ. ಶೆಣೈ**

## ಡಿಸೆಂಬರ್ 2ರ ಸಭೆಯ ಛಾಯಾಚಿತ್ರಗಳು




ಶಾಂತಚಿತ್ತರಾಗಿ ಕಾರ್ಯನಿರ್ವಹಿಸುತ್ತಾ ಕ್ಲಬ್ಬಿನ, ವಲಯದ ಮತ್ತು ಜಿಲ್ಲಾ ಮಟ್ಟದ ಕಾರ್ಯಕ್ರಮಗಳಲ್ಲಿ ಸತತವಾಗಿ ಯಶಸ್ಸನ್ನು ಪಡೆಯುತ್ತಾ ಎಲ್ಲೆಡೆ ಹೊಸ ಹೊಸ ಮೈಲುಗಲ್ಲನ್ನು ಸ್ಥಾಪಿಸುತ್ತಿರುವ ನಮ್ಮ ಸದಾ ಹಸನ್ಮುಖಿ ಅಧ್ಯಕ್ಷರಾದ ರೊ. ಅನಿಲ್ ಕುಮಾರ್ ಅವರಿಗೆ ಐಸಿರಿಯ ಎಲ್ಲಾ ಸದಸ್ಯರ ಪರವಾಗಿ ಸಹಾಯಕ ಗವರ್ನರ್ ರೊ. ಅಮಿತ್ ಅರವಿಂದ್ 02/12/25 ರಂದು ಕ್ಲಬ್ ಅಸೆಂಬ್ಲಿಯಲ್ಲಿ ಗೌರವಿಸಿದರು.







ನಮ್ಮ ಸದಸ್ಯರೂ, ಝೋನಲ್ ಟ್ರೇನಿಂಗ್ ಫೆಸಿಲಿಟೇಟರ್ ರೊ. PHF. ಡಾ. ಎ. ಗಣೇಶ ಮತ್ತು ಝೋನಲ್ ಲೆಫ್ಟಿನೆಂಟ್ ರೊ. PHF. ಸ್ಮಿತಾ ಜಿ. ಕಾಮತ್ 02/12/25ರ ಕ್ಲಬ್ ಅಸೆಂಬ್ಲಿಯಲ್ಲಿ DG Visit ಬಗ್ಗೆ ಮಾರ್ಗದರ್ಶನ ನೀಡಿದರು.



## ಕಾರ್ಯದರ್ಶಿಯವರ ವರದಿ

ರೋಟರಿ ಐಸಿರಿಯ 21ನೇ ವಾರದ ಸಭೆ 2/12/25 ರಂದು RCC ಕಾರ್ಯಾಲಯದಲ್ಲಿ ನಡೆಯಿತು. ರೊ. ಮಂಜುನಾಥ್ ಉಪಾಧ್ಯ ಅವರು ಕೊರಳ ಲಾಂಛನ ತೊಡಿಸಿ ಅಧ್ಯಕ್ಷರು ಸಭೆಯನ್ನು ಆರಂಭಿಸಿದರು. ರೊ. ಪ್ರಭಾಕರ್ ಯು ರೆಂಜಾಳ ಅವರು ಪ್ರಾರ್ಥನೆ ನಡೆಸಿದರು. ಅಧ್ಯಕ್ಷ ರೊ. ಅನಿಲ್ ಕುಮಾರ್ ಅವರು ಸ್ವಾಗತಿಸಿದರು.

ಸಹಾಯಕ ಗವರ್ನರ್ ರೊ. ಅಮಿತ್ ಅರವಿಂದ್ ಅವರಿಗೆ DG ವಿಸಿಟ್ ನ ಆಮಂತ್ರಣ ಪತ್ರಿಕೆ ನೀಡಿ ಆಹ್ವಾನಿಸಿದರು. ಸಭೆಯನ್ನು ಸಹಾಯಕ ಗವರ್ನರ್ ಅವರಿಗೆ ಹಸ್ತಾಂತರಿಸಿದರು. ಸಹಾಯಕ ಗವರ್ನರ್ ರೊ. ಅಮಿತ್ ಅರವಿಂದ್ ಅವರು ಅಸೆಂಬ್ಲಿ ನಡೆಸುತ್ತಾ DG ವಿಸಿಟ್ ನ ಪೂರ್ವ ತಯಾರಿಗಳನ್ನು ವಿವರಿಸಿದರು. ಅಧ್ಯಕ್ಷ, ಕಾರ್ಯದರ್ಶಿ ಹಾಗೂ ನಿರ್ದೇಶಕರಿಗೆ ಸಲಹೆಗಳನ್ನು ನೀಡಿದರು. ಕೊನೆಯಲ್ಲಿ ಈ ವರ್ಷದ ಐಸಿರಿಯ ಎಲ್ಲಾ ಸಾಧನೆಗಳನ್ನು ಪ್ರಶಂಸಿಸಿದರು.

ವಾರದ ಸಂಚಿಕೆ ಐಶ್ವರ್ಯವನ್ನು ಸಹಾಯಕ ಗವರ್ನರ್ ಅವರು ಬಿಡುಗಡೆಗೊಳಿಸಿದರು. ಸಂಪಾದಕರಾದ ರೊ. ರಾಜೇಶ್ ಡಿ ಶೆಣೈ ಅವರು ಸಹಕರಿಸಿದರು. ಅಂಕಣಗಳನ್ನು ನೀಡಿ ಪ್ರೋತ್ಸಾಹಿಸಿದ ಸದಸ್ಯರಿಗೆ ಸಂಪಾದಕರು ಧನ್ಯವಾದ ನೀಡಿದರು.

Zonal Learning Facilitator ರೊ. ಎ. ಗಣೇಶ್ ಅವರು ಮಾತನಾಡಿ ಗವರ್ನರ್ ಭೇಟಿಯ ದಿನದ ಸಂಪೂರ್ಣ ವೇಳಾಪಟ್ಟಿಯನ್ನು ತಯಾರಿಸುವಂತೆ ಸೂಚಿಸಿದರು. ವಲಯ ಸೇನಾನಿ ರೊ. ಸ್ಮಿತಾ ಜಿ. ಕಾಮತ್ ಅವರು ಐಸಿರಿಯ ಪೂರ್ವತಯಾರಿಯನ್ನು ಮೆಚ್ಚಿದರು. ಅಧ್ಯಕ್ಷರ ನೇತೃತ್ವದಲ್ಲಿ ಜಿಲ್ಲಾ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಭಾಗವಹಿಸಿ ದೊರಕಿದ ಯಶಸ್ಸನ್ನು ಸ್ಮರಿಸಿದರು. ಕ್ಲಬ್ ನ ಸದಸ್ಯರ ಅಪೇಕ್ಷೆಯ ಮೇರೆಗೆ ಸಹಾಯಕ ಗವರ್ನರ್ ಅವರು ಅಧ್ಯಕ್ಷರನ್ನು ಗೌರವಿಸಿ ಅಭಿನಂದಿಸಿದರು.

ರೊ. ಮಂಜುನಾಥ್ ಉಪಾಧ್ಯ ಅವರು ವಲಯ ಕ್ರೀಡಾಕೂಟದಲ್ಲಿ ಐಸಿರಿಯ ಸಾಧನೆಯನ್ನು ಅಭಿನಂದಿಸಿದರು. ಜೊತೆಗೆ ಸ್ಪೋರ್ಟ್ ಕಾರ್ಡಿನೇಟರ್ ರೊ. ಅಶೋಕ್ ನಾಯಕ್ ಅವರ ಪರಿಶ್ರಮವನ್ನು ಪ್ರಶಂಸಿಸಿದರು.

ರೊ. ಗುರುಪ್ರಸಾದ್ ಕಾಮತ್ ಅವರು ಜಿಲ್ಲಾ ಗವರ್ನರ್ ಅಧಿಕೃತ ಭೇಟಿಯ ಬಗ್ಗೆ ಚರ್ಚೆ ನಡೆಸಿದರು. ವಲಯ ಕ್ರೀಡಾಕೂಟದ ಸಾಧನೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ರೊ. ಅಶೋಕ್ ನಾಯಕ್ ಅವರ ಒಳಗೊಳ್ಳುವಿಕೆ ಎಲ್ಲರನ್ನೂ ಒಂದುಗೂಡಿಸಲು ಸಹಕಾರಿಯಾಯಿತು ಎಂದರು. ರೊ. ರಾಜೇಶ್ ಡಿ ಶೆಣೈ ಅವರು ನವೆಂಬರ್ ತಿಂಗಳ ಆರಂಭದಲ್ಲಿ ವಲಯ ಸಾಂಸ್ಕೃತಿಕ ಸ್ಪರ್ಧೆಯಲ್ಲಿ 9 ಬಹುಮಾನ ಗೆದ್ದರೆ ನವೆಂಬರ್ ತಿಂಗಳ ಕೊನೆಯಲ್ಲಿ ವಲಯ ಕ್ರೀಡಾ ಕೂಟದಲ್ಲಿ 18 ಬಹುಮಾನ ಪಡೆಯುವ ಮೂಲಕ ನವೆಂಬರ್ ತಿಂಗಳನ್ನು ವಿಶೇಷ ತಿಂಗಳು ಎಂದು ಘೋಷಿಸಿದರು. ಅಲ್ಲದೆ ಇದೇ ತಿಂಗಳಲ್ಲಿ ಸತತ ಮೂರು ಹೊರಾಂಗಣ ಸಭೆ ನಡೆಸಲಾಗಿದೆ. ಇದು ದಾಖಲೆ ಎಂದರು.

ನಿಯೋಜಿತ ಅಧ್ಯಕ್ಷರಾದ ರೊ. ಸಂದೀಪ್ ಕುಮಾರ್ ಅವರು ವಲಯ ಸ್ಪೋರ್ಟ್ ನ ಅನುಭವ ಹಂಚಿಕೊಂಡು ತಮ್ಮ ವೀಕ್ಷಣೆಯನ್ನು ತಿಳಿಸಿದರು. ಅಧ್ಯಕ್ಷರು ಮುಂಬರುವ DG visit ನಲ್ಲಿ ನಡೆಯಬೇಕಾಗಿರುವ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ಅಂತೆಯೇ ಸ್ಪೋರ್ಟ್ ನಲ್ಲಿ ಭಾಗವಹಿಸಿದ ಸರ್ವ ಸದಸ್ಯರನ್ನು ಅಭಿನಂದಿಸಿದರು.

ಮಾಸ್ಟರ್ ಆಕರ್ಷ್ ವಾರದ ಅದೃಷ್ಟಶಾಲಿ ವ್ಯಕ್ತಿಯನ್ನು ಚೀಟಿ ಎತ್ತುವ ಮೂಲಕ ಆಯ್ಕೆ ಮಾಡಿದರು. ರೊ. ಸುದರ್ಶನ್ ಪೈ ಅದೃಷ್ಟಶಾಲಿ ರೋಟೇರಿಯನ್ ಆಗಿ ಆಯ್ಕೆ ಆದರು.

ಜೊತೆಕಾರ್ಯದರ್ಶಿ ರೊ. ಗುರುಪ್ರಸಾದ್ ಕಾಮತ್ ಅವರು ಧನ್ಯವಾದ ಸಮರ್ಪಿಸಿದರು. ದಂಡಪಾಣಿ ಕೊರಳ ಲಾಂಛನ ತೆಗೆದು ಅಧ್ಯಕ್ಷರು ಸಭೆಯನ್ನು ಮುಂದೂಡಿದರು. ರಾಷ್ಟ್ರ ಗೀತೆಯೊಂದಿಗೆ ಸಭೆ ಮುಕ್ತಾಯಗೊಂಡಿತು.

## "ಐಶ್ವರ್ಯ" 22ನೇ ಸಂಚಿಕೆ ಬಿಡುಗಡೆ




ರೊ. ರಾಜೇಶ್ ಡಿ. ಶೆಣೈ ಸಂಪಾದಕತ್ವದ ರೋಟರಿ ಐಸಿರಿಯ "ಐಶ್ವರ್ಯ" ಸಾಪ್ತಾಹಿಕದ ಇಪ್ಪತ್ತೆರಡನೇ ಸಂಚಿಕೆಯನ್ನು ಸಹಾಯಕ ಗವರ್ನರ್ ರೊ. ಅಮಿತ್ ಅರವಿಂದ್ 02/12/2025ರಂದು ಬಿಡುಗಡೆಗೊಳಿಸಿದರು.




ರೋಟರಿ ಐಸಿರಿಯ 21ನೇ ವಾರದ ಸಭೆಯಲ್ಲಿ ಅದೃಷ್ಟಶಾಲಿ ರೋಟೇರಿಯನ್ ಆಯ್ಕೆಯನ್ನು ಮಾಸ್ಟರ್ ಆಕರ್ಷ್ ನಡೆಸಿ, ರೊ. ಸುದರ್ಶನ್ ಎಸ್. ಪೈ ಅದೃಷ್ಟಶಾಲಿ ವ್ಯಕ್ತಿಯಾಗಿ ಆಯ್ಕೆಯಾದರು. ಅವರ ಪರವಾಗಿ ರೊ. ಸುನಿಲ್ ಕುಮಾರ್ ಬಹುಮಾನ ಸ್ವೀಕರಿಸಿದರು.

**The Four-Way Test** of the things we think, say or do is a test used by Rotarians world-wide as a moral code for personal and business relationships.

The Four-Way Test was created in 1932 by Rotarian Herbert J. Taylor.

Four-Way Test is a nonpartisan and non-sectarian ethical guide.

Considerable time was spent in developing four short questions which now make up the Four-Way Test. Here are the four questions:

- Is it the TRUTH?
- Is it FAIR to all concerned?
- Will it build GOODWILL and BETTER FRIENDSHIPS?
- Will it be BENEFICIAL to all concerned?